ಬಳಿಕ ಸಂಪಾದನೆಯ ಅಗತ್ಯವಾದರೂ ಅವನಿಗೆ ಬಿದ್ದಿರಲಿಲ್ಲ. ಮೊದಲೇ ಕೂಲಿ ಕಾರ್ಮಿಕ, ಹಾಗಾಗಿ ಕೆಲಸಕ್ಕೆ ಹೋದರೆ ಹೋದ, ಇಲ್ಲವಾದರೆ ಇಲ್ಲ.

ಕಾಯಕನಾಥ ಮತ್ತು ಮಿನಾಲಿ ಬಂಗಾಳದ ಯಾವುದೋ ಊರಲ್ಲಿ ಕೂಲಿ ಮಾಡಿಕೊಂಡಿದ್ದ ಕಡೆ, ಇಬ್ಬರೂ ಪರಸ್ಪರ ನೋಡಿ, ಮೆಚ್ಚಿ ಓಡಿ ಹೋಗಿ ಮದುವೆ ಆಗಿ ಕರ್ನಾಟಕಕ್ಕೆ ಬಂದು, ಮಂಗಳೂರಿನಲ್ಲಿ ಸಂಸಾರದ ಬಂಡಿ ಹೂಡಿದ್ದರು. ಹೀಗೆ ವಲಸೆ ಬಂದು ಯಾವುದೋ ನಿರ್ಮಾಣದ ಹಂತದಲ್ಲಿದ್ದ ಕಟ್ಟಡದಲ್ಲಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸತೊಡಗಿದರು. ಇಬ್ಬರದ್ದು ಅನ್ಯೋನ್ಯ ದಾಂಪತ್ಯ. ತಮ್ಮ ದೇಹದ ಶಕ್ತಿಯನ್ನೇ ಬಂಡವಾಳ ಮಾಡಿಕೊಂಡ ದುಡಿಮೆ ಅವರಿಗೆ ಶ್ರಮವೆಂದೇನೂ ಅನ್ನಿಸಲಿಲ್ಲ. ಏಕೆಂದರೆ ಅಲ್ಲಿ ಅವರಿಬ್ಬರ ನಡುವೆ ಪ್ರೀತಿ ಬಲವಾಗಿತ್ತು. ಆನಂದದಿಂದ ಜೀವನ ಸಾಗಿಸುತ್ತಿದ್ದ ಅವರ ಜೀವನದಲ್ಲಿ ಅವರ ಒಲುಮೆಯ ಕುಡಿಯಾಗಿ ಸಾರಂಗ ಹುಟ್ಟಿದ. ಜೀವನ ಚೆನ್ನಾಗಿಯೇ ಸಾಗಿತ್ತು. ಒಲವೇ ನಮ್ಮ ಬದುಕು ಅವರ ದಾಂಪತ್ಯದ ಗೀತೆಯಾಗಿತ್ತು. ಸಾರಂಗ ಅವರ ಬದುಕಿನ ಕಣ್ಣಾಗಿದ್ದ.

ಬದುಕಿಗೆ ಹಬ್ಬವಾಗಿದ್ದ. ಅವನೆದ್ದು ಅಡ್ಡಾಡುವಂತಾದಾಗ ಮಿನಾಲಿ ಮತ್ತೆ ದುಡಿಮೆಗಿಳಿದಳು. ಮಗು ಹುಟ್ಟಿದ ಬಳಿಕ ಅವರ ಜೀವನ ಇನ್ನೂ ಸುಂದರವಾಗಿತ್ತು. ವಾರವಿಡೀ ದುಡಿತ, ಭಾನುವಾರ ಒಟ್ಟಿಗೇ ಖುಷಿ ಬಂದಲ್ಲಿ ತಿರುಗಾಡಿ ಹೊರಗೇ ತಿಂದುಂಡು, ಮೆಚ್ಚಿನ ಸಿನಿಮಾ ನೋಡಿ ಬರುತ್ತಿದ್ದರು. ದುಡಿದು ಖರ್ಚು ಮಾಡಿ ಉಳಿದ ಹಣ ಭವಿಷ್ಯಕ್ಕೆಂದು ಕೂಡಿಡುತ್ತಿದ್ದರು. ಒಂದು ಕಟ್ಟಡ ಮುಗಿದೊಡನೆ ಮತ್ತೊಂದು ಹೊಸ ಕಟ್ಟಡ ನಿರ್ಮಾಣದ ಕಡೆ ಹೋಗಿ ಮತ್ತೆ ಶೆಡ್ಡು ಕಟ್ಟಿಕೊಂಡು ಹೊಸತಾಗಿ ಮನೆ ಹೂಡಬೇಕಿತ್ತು. ಹೀಗೇ, ಸಾರಂಗನಿಗೆ ನಾಲ್ಕು ವರ್ಷಗಳು ತುಂಬಿದವು. ಅವನಿಗೆ ತಾವು ಕೆಲಸ ಮಾಡುವ ಕಟ್ಟಡದ ಬಳಿ ಇರುವ ಅಂಗನವಾಡಿಗೆ ದಾಖಲಿಸಿದರು. ಅವನು ನಿತ್ಯ ತಕರಾರಿಲ್ಲದೇ ಹೋಗಿ ಬರುತ್ತಿದ್ದ. ಮುಂಚಿನಂದಲೂ ಓದಿನ ಬಗ್ಗೆ ಹೆಚ್ಚು ಆಸ್ಥೆ ಇದ್ದ ಕಾಯಕನಾಥನಿಗೆ ಮಗ ತನ್ನಂತಾಗಬಾರದೆನ್ನುವ ಹಟ ಬಲವಾಗಿಯೇ ಇತ್ತು.

ಈ ಮಧ್ಯೆ ಕಾಯಕನಾಥ ಅಲ್ಲಿನ ಊರಿನವರೇ ಕೆಲಸಗಾರರ ಜೊತೆ ಸೇರಿ ಸ್ಫುಟವಾಗಿ ಕನ್ನಡ ಮಾತನಾಡಲು ಕಲಿತಿದ್ದ. ಯಾರೂ ಅವನನ್ನು ಬಂಗಾಲದವನು ಎಂದು ಹೇಳಲಾಗದಷ್ಟು ಅವನ ಉಚ್ಚಾರದ ಸ್ಪಷ್ಟತೆ ಇತ್ತು. ಇದು ಅವನಿಗೊಂದು ಹೆಮ್ಮೆಯ ವಿಷಯವಾಗಿತ್ತು. ಸಾರಂಗನಿಗೆ ಕನ್ನಡ ಕಲಿಸಲು, ತಾನು ಕಲಿಯಬೇಕೆಂಬ ಭಾವನೆ ಬಂದದ್ದೇ ತಡ, ಇದೇ ಆಸಕ್ತಿ ಮುಂದುವರೆದು ಅಲ್ಲೇ ಶೆಡ್ಡಿನಲ್ಲಿ ಉಳಿದುಕೊಂಡಿದ್ದ ಉತ್ತರ ಕರ್ನಾಟಕದ ಕೆಲಸಗಾರರ ಶಾಲೆಗೆ ಹೋಗುತ್ತಿದ್ದ ಮಕ್ಕಳ ಬಳಿ ಕುಳಿತು ಕನ್ನಡ ಓದು ಬರಹ ಕಲಿತಿದ್ದ. ಒಂದಷ್ಟು ಕಷ್ಟ ಪಟ್ಟು ಓದುವುದನ್ನು ರೂಢಿಸಿಕೊಂಡು ಬಳಿಕ ಪಳಗಿದ. ಮನಸ್ಸಿದ್ದರೆ ಮಾರ್ಗವುಂಟು ಎಂಬುದು ಇಂಥವನಿಗೆ ನೋಡಿಯೇ ಗಾದೆ ಮಾಡಿರಬೇಕು. ಕಾಯಕನಾಥ ಅಕ್ಷರಶಃ ಕನ್ನಡದವನೇ ಅಗಿಬಿಟ್ಟಿದ್ದ. ಹತ್ತಿರದ ಗ್ರಂಥಾಲಯಕ್ಕೆ ಹೋಗಿ ಸಿಕ್ಕಿದ ಪುಸ್ತಕಗಳನ್ನು ಓದುತ್ತಿದ್ದ. ಇದರಿಂದ ಭಾಷೆಯ ಮೇಲೆ ಅವನಿಗೆ ಒಳ್ಳೆಯ ಹಿಡಿತ ಬಂದಿತ್ತು.

ಹೀಗಿರುವಾಗ ಒಂದು ದಿನ ಮಿನಾಲಿ ಕೆಲಸ ಮಾಡುವ ಜಾಗದಲ್ಲಿ ಇದ್ದಕ್ಕಿದ್ದಂತೇ ತಲೆ ತಿರುಗಿ ಬಿದ್ದಳು. ನಿಶ್ಶಕ್ತಿ ಇರಬೇಕೆಂದು ಕಾಯಕನಾಥ ಅವಳನ್ನು ಶೆಡ್ಡಿಗೆ ಕರೆ ತಂದು ಆರೈಕೆ ಮಾಡಿದ. ಚೆನ್ನಾಗಿ ನೋಡಿಕೊಂಡ. ಮಿನಾಲಿ ವೈದ್ಯರಲ್ಲಿಗೆ ಹೋಗಿ ಮಾತ್ರೆ ತಂದು ನುಂಗಿದಳು. ಒಂದು ವಾರ ಮನೆಯಲ್ಲೇ ಕುಳಿತು ಸುಧಾರಿಸಿಕೊಂಡಳು. ಮತ್ತೆ ಕೆಲಸಕ್ಕೆ ಹೋಗತೊಡಗಿದವಳಿಗೆ ಮತ್ತೆ ಆ ಘಟನೆ ಪುನರಾವರ್ತನೆಯಾಯಿತು. ಈ ಸಲ ಮಾತ್ರ ಕಾಯಕನಾಥನಿಗೆ ಚಿಂತೆಗಿಟ್ಟುಕೊಂಡಿತು. ಕಟ್ಟಡದ ಗುತ್ತಿಗೆದಾರ ಮಿನಾಲಿಯನ್ನು ಕೆಲಸಕ್ಕೆ ತೆಗೆದುಕೊಳ್ಳಲು ನಿರಾಕರಿಸಿದ.

“ಇದು ಬಹುಮಹಡಿ ಕಟ್ಟಡ. ಅವಳು ಮೇಲಿಂದ ಬಿದ್ದು ಜೀವಕ್ಕೆ ಹಾನಿಯಾದರೆ, ನನ್ನ ಕುತ್ತಿಗೆಗೆ ಬರುತ್ತೆ. ನಾನು ಪೊಲೀಸು, ಕೇಸು ಎಂದು ಅಲೆಯಬೇಕಾಗುತ್ತದೆ. ಅವಳು ಮನೇಲಿರಲಿ. ನೀನು ಬೇಕಾದರೆ ಕೆಲಸಕ್ಕೆ ಬಾ. ಅವ್ಳು ಬೇಡಾ...” ಎಂದು ನಿಷ್ಠುರನಾಗಿ ಕಾಯಕನಾಥನಿಗೆ ತಾಕೀತು ಮಾಡಿದ. ಅಲ್ಲಿನ ಕೆಲಸ, ಜನರಿಗೆ ಒಗ್ಗಿ ಹೋಗಿದ್ದ ಸಾರಂಗನೂ ಹತ್ತಿರದ ಅಂಗನವಾಡಿಗೆ ಹೋಗುತ್ತಿದ್ದ. ಅವನಿಗೂ ತೊಂದರೆಯಾಗುತ್ತದೆ ಎನಿಸಿ, ಕಾಯಕನಾಥ ಬೇರೆಡೆ ಕೆಲಸ ಮಾಡಲು ಮನಸ್ಸು ಮಾಡಲಿಲ್ಲ. ಅವನಿಗೂ, ಪತ್ನಿಯ ಆರೋಗ್ಯಕ್ಕಿಂತ ಅವಳ ಸಂಪಾದನೆ ಮುಖ್ಯ ಅಲ್ಲವೆನಿಸಿ ಒಪ್ಪಿದ.

ದಿನೇ ದಿನೇ ಕೃಶವಾಗುತ್ತಿದ್ದ ಮಿನಾಲಿಯ ದೇಹಸ್ಥಿತಿ ಅವನನ್ನು ಚಿಂತೆಗೀಡು ಮಾಡಿತು, “ಮಿನಾಲಿ..? ಏನಾಗುತ್ತಿದೆ ನಿನಗೆ..? ಇತ್ತೀಚೆಗೆ ತುಂಬಾ ಸೊರಗಿ ಹೋಗಿದ್ದೀಯಾ. ನೀನು ನನ್ನ ಆ ಹಳೇ ಮಿನಾಲಿಯೇ ಎಂಬುವಷ್ಟು ಸೊರಗಿ ಹೋಗಿದ್ದೀಯಾ. ನನ್ಗೆ ಏನು ಮಾಡಬೇಕೆಂದೇ ತೋಚುತ್ತಿಲ್ಲ...” ಬಣ್ಣ ಕಳೆದುಕೊಂಡು ಬಿಳುಪೇರಿ ಹೋಗಿದ್ದ ಪತ್ನಿಯ ಮುಖವನ್ನು ಕಂಡು ದಿಗಿಲಿನಿಂದ ನುಡಿದ ಕಾಯಕನಾಥ.

“ನನಗೇನೂ ಆಗಿಲ್ಲ. ನಾನು ಹುಷಾರಾಗೇ ಇದೀನಿ... ನೀನು ಸುಮ್ನೆ ಚಿಂತೆ ಮಾಡ್ತೀಯಾ... ಯಾವುದೋ ಕೆಟ್ಟ ಗಾಳಿ ತಾಗಿರಬೇಕು” ಎಂದು ಮಿನಾಲಿಯೇ ಸಾಂತ್ವನ ಹೇಳಿದಳು.

“ಸ್ವಲ್ಪ ದಿನ ಆರಾಮ ಮಾಡು. ನಂತರ ನೋಡೋಣ” ಎಂದು ಕಾಯಕನಾಥನೊಬ್ಬನೇ ಕೆಲಸಕ್ಕೆ ಹೋಗಿ ಬರತೊಡಗಿದ. ಮಿನಾಲಿ ಸೈಟಿನ ಕೋಣೆಯಲ್ಲೇ ಸಾರಂಗನನ್ನು ನೋಡಿಕೊಂಡು ದಿನ ಕಳೆದಳು. ಆದರೆ ಬರುಬರುತ್ತಾ ಮಿನಾಲಿಯ ದೇಹ ಕೃಶಗೊಂಡು ಎದ್ದು ನಿಲ್ಲಲೂ ಆಗದಂಥ ಸ್ಥಿತಿ ಉದ್ಭವಿಸಿತು. ಅವನ ಊರಿನವರು ಕೆಲವು ಪರಿಚಿತರು, ಅದೇ ಸೈಟಿನಲ್ಲಿ ಗಾರೆ ಕೆಲಸ ಮಾಡಿಕೊಂಡಿದ್ದವರು, ಅವಳನ್ನು ಆಸ್ಪತ್ರೆಗೆ ಕೊಂಡೊಯ್ದು ತೋರಿಸುವಂತೆ ಸಲಹೆ ನೀಡಿದರು. ಅವರ ಮಾತಿಗೊಪ್ಪಿ, ಕಾಯಕನಾಥ ಮಿನಾಲಿಯನ್ನು ಸರಕಾರಿ ಆಸ್ಪತ್ರೆಗೆ ಕರೆದೊಯ್ದು ತೋರಿಸಿದ. ಕೆಲವು ದಿನಗಳಿಗೆ ದಾಖಲು ಮಾಡಿದ. ಆದರೆ ಯಾವ ಗುಣಮುಖವೂ ಕಾಣಲಿಲ್ಲ. ಇಲ್ಲಿದ್ದರೆ ಮಿನಾಲಿಯನ್ನು ಕಳೆದುಕೊಳ್ಳುವ ಭಯ ಕಾಯಕನಾಥನನ್ನು ಕಾಡತೊಡಗಿತು.

“ನಾನು ಊರಿಗೆ ಹೋಗಿ ನಮ್ಮ ಬಾಬಾಗೆ ತೋರಿಸ್ತೇನೆ. ಅವಳಲ್ಲಿ ಯಾವುದೋ ಕೆಟ್ಟ ಗಾಳಿ ಸೋಕಿರಬೇಕು”.

ಸೈಟಿನ ನಿರ್ವಾಹಕರು ಅವನ ಯೋಚನಾ ಧಾಟಿಗೆ ಬಯ್ದು ಬುದ್ಧಿವಾದ ಹೇಳಿದರು, “ಕೆಟ್ಟಗಾಳಿ ಅಂತ ಏನೂ ಇರಲ್ಲ. ಮೂಢನಂಬಿಕೆಗೆ ಬಿದ್ದು ಹೆಂಡತಿ ಪ್ರಾಣದ ಜೊತೆ ಆಟ ಆಡಬೇಡ. ಅವಳಿಗೆ ಎದ್ದು ನಿಲ್ಲಲೂ ಆಗಲ್ಲ. ಬಂಗಾಲ ಏನು ಹತ್ತಿರವಿದೆಯೇ? ಮೂರು ದಿನ ರೈಲಿನ ಪ್ರಯಾಣದಲ್ಲಿ ಅವಳನ್ನು ಹೇಗೆ ಕರ್ಕೊಂಡು ಹೋಗ್ತೀಯಾ? ಇಲ್ಲೇ ಬೇರೆ ತಜ್ಞ ವೈದ್ಯರಿಗೆ ತೋರಿಸು” ಯಾರ ಬುದ್ಧಿವಾದವೂ ಕಾಯಕನಾಥನಿಗೆ ರುಚಿಸಲಿಲ್ಲ. ಹಟಕ್ಕೆ ಬಿದ್ದು ರೈಲು ಟಿಕೇಟು ಮಾಡಿ ಪತ್ನಿ, ಮಗನೊಡನೆ ಬಂಗಾಲಕ್ಕೆ ಹೊರಟೇ ಬಿಟ್ಟ.

ಮೊದಲೇ ಜೀವದಲ್ಲಿ ಉಸಿರಷ್ಟೇ ಉಳಿಸಿಕೊಂಡು ಅರೆಜೀವದಂತಾಗಿದ್ದ ಮಿನಾಲಿ, ಮೂರು ದಿನಗಳ ರಾತ್ರಿ ಹಗಲು ಪ್ರಯಾಣ ಮಾಡಿ ಅಲ್ಲಿ ತಲುಪುವ ಹೊತ್ತಿಗೆ ಪೂರ್ತಿ ಬಸವಳಿದಳು. ರೈಲು ಪ್ರಯಾಣದ ನಂತರ ಮತ್ತೆ ಅವನ ಊರು ಸೋದಾಪುರಕ್ಕೆ ಹೋಗಲು ಬಸ್ಸು ಹಿಡಿಯಬೇಕಿತ್ತು. ಮಿನಾಲಿಯ ವಿಷಮಗೊಂಡ ಸ್ಥಿತಿ ಕಂಡು ತಾನು ಇಲ್ಲಿಗೆ ಬರುವ ತಪ್ಪು ನಿರ್ಧಾರ ಮಾಡಿದೆ ಎಂದು ಕಾಯಕನಾಥನ ಅರಿವಿಗೆ ಬರತೊಡಗಿತ್ತು. ಅವಳು ಮಾತನಾಡಲೂ ಕಷ್ಟಪಡುತ್ತಿದ್ದಳು. ನೀರಷ್ಟೇ ಅವಳ ಆಹಾರವಾಗಿತ್ತು. ಸಾರಂಗನಂತೂ ತಾಯಿಯ ಸ್ಥಿತಿ ಕಂಡು ಕಂಗಾಲಾಗಿ ಅಳತೊಡಗಿದ್ದ. ಪತ್ನಿಯ ಸ್ಥಿತಿಗೆ ಕಳವಳ ಪಡುತ್ತ, ಮಗನಿಗೂ ಸಂತೈಸುತ್ತಾ ಕಾಯಕನಾಥ ತಲ್ಲಣಿಸಿ ಹೋದ. ಮುಕ್ಕಾಲು ದಿನದ ಬಸ್ಸು ಪ್ರಯಾಣದ ನಂತರ ಅವರು ಸೋದಾಪುರದ ನಿಲ್ದಾಣದಲ್ಲಿಳಿದರು.

ಊರು ಬಿಡುವಾಗಿನ ಚಿತ್ರಣ ಹೇಗಿತ್ತೋ, ಈಗಲೂ ಏಳು ವರ್ಷಗಳ ಬಳಿಕ ಅವನು ಮತ್ತೆ ಕಾಲಿಟ್ಟ ತನ್ನ ಹುಟ್ಟೂರು ಹಾಗೇ ಇತ್ತು. ಭೌತಿಕವಾಗಿ ಏನೂ ಬದಲಾವಣೆ ಕಾಣಲಿಲ್ಲ. ಸೋದಾಪುರ ಅಲ್ಲಿನ ಜಿಲ್ಲಾ ಕೇಂದ್ರದಿಂದ ಬಿಸುಟು ಬಿಟ್ಟ ಹಳ್ಳಿಯಾಗಿತ್ತು. ಒಂದು ಉದ್ದ ಕೇರೆ ಹಾವಿನಂತೆ ರಸ್ತೆ, ಇನ್ನೂರೈವತ್ತು ಮನೆ ಇರಬಹುದೇನೋ. ಎಲ್ಲಾ ಅವಶ್ಯಕತೆಗಳಿಗೆ ಜಿಲ್ಲಾಕೇಂದ್ರಕ್ಕೆ ಓಡಬೇಕಿತ್ತು. ಅಪರೂಪಕ್ಕೆ ದಿನಕ್ಕರೆಡು ಬಾರಿ ಓಡಾಡುವ ಬಸ್ಸು ಬಿಟ್ಟರೆ ತಳ್ಳುಗಾಡಿಯೋ ಬೈಲು ಗಾಡಿಯೋ ಸಂಚಾರದ ಸಾಧನವಾಗಿತ್ತು. ಜನರಾಗಲೀ ಊರಾಗಲೀ ಆಧುನಿಕತೆಗೆ ಹೆಚ್ಚು ತೆರೆದುಕೊಳ್ಳದಷ್ಟು ಅಲ್ಲಿ ಬಡತನ ತಾಂಡವವಾಡುತ್ತಿತ್ತು. ಕಾಯಕನಾಥನಂತೆ ಅಲ್ಲಿನ ಜನ ತಮ್ಮ ಜೀವನೋಪಾಯಕ್ಕೆಂದು ಊರು ತೊರೆದು ಹೋದವರೇ ಜಾಸ್ತಿ. ಹಾಗೆ ಜೀವನೋಪಾಯ ಹುಡುಕಿಕೊಂಡು ಇಲ್ಲಿ ಬಂದು